ಬಂದವರಾಗಿದ್ದೆವು. ಸೇನಾಧಿಕಾರಿಯೊಬ್ಬರು ನಮ್ಮ ವಿಳಾಸ ಬರಕೊಂಡರು. ಆಮೇಲೆ, ಬಂದವರಿಗೆ ಕರೆತಂದು ಇಂಡಿಯನ್ ನೇವಿಯ ಹಡಗೊಂದರಲ್ಲಿ ಚೆನ್ನೈಗೆ ಕಳುಹಿಸಿಕೊಟ್ಟರು. ನಾನು ಹಾಗೆ ಬಂದವನು ಪ್ಲಾಂಟೇಶನ್ ಕೆಲಸಕ್ಕೆ ಸೇರಿಕೊಂಡೆ. ಈಗ ವಯಸ್ಸಾಗಿದೆ.''


"ಅಜ್ಜಾ, ನೀವು ಜಾಫ್ನಾದಲ್ಲೇ ನಿಲ್ಲಬಹುದಿತ್ತಲ್ಲಾ? ತಂಬಿ ದೊರೈ ಮನೆ ಕಟ್ಟಿ ಕೊಡುತ್ತಿದ್ದನಲ್ಲಾ?" ಅಜ್ಜ ನಿರಾಶೆಯ ಸ್ವರದಲ್ಲಿ ಹೇಳಿದರು.

"ಅಲ್ಲಿ ನನ್ನ ಗುರುತಿನವರು ಯಾರೂ ಇರಲಿಲ್ಲ. ಅಲ್ಲದೆ ಭಾರತೀಯ ಸೇನೆ ಈಳಂ ಶ್ರೀಲಂಕಾ ನಡುವೆ ಶಾಂತಿ ಮಾತುಕತೆ ಏರ್ಪಡಿಸುತ್ತದೆ. ವೇಲುಪಿಳ್ಳೈಗೆ ಜಾಫ್ನಾ ಪ್ರದೇಶದ ಗವರ್ನರ್ ಪಟ್ಟ ಸಿಗುತ್ತದೆಂದು ನಮ್ಮನ್ನು ಬಂಧಿಸಿದ್ದ ಭಾರತೀಯ ಸೇನೆ ನಮ್ಮಲ್ಲಿ ಹೇಳಿತ್ತು. ಪ್ರತೀಕಾರಕ್ಕೆ ಅವಕಾಶವೇ ಇಲ್ಲದ ಮೇಲೆ ಜಾಫ್ನಾದಲ್ಲುಳಿದು ಮಾಡುವುದೇನು? ಎಂದು ನಾನು ಬಂದುಬಿಟ್ಟೆ. ಆದರೆ, ವೇಲುಪಿಳ್ಳೈ ಶಾಂತಿ ಮಾತುಕತೆಗೆ ಒಪ್ಪಿಗೆ ನೀಡಲಿಲ್ಲ. ಈಳಂ ಸೇನೆಗೂ, ಭಾರತದ ಶಾಂತಿ ಸೇನೆಗೂ ದೊಡ್ಡ ಹೋರಾಟ ನಡೆದು ಹೋಯಿತು. ಯಾರೂ ಸೋಲಲಿಲ್ಲ. ಯಾರೂ ಗೆಲ್ಲಲಿಲ್ಲ. ಎರಡೂ ಕಡೆ ಅಪಾರ ಸಾವು ನೋವುಗಳಾದವು. ವೇಲುಪಿಳ್ಳೈ ಸೆರೆ ಸಿಗುವುದಿಲ್ಲವೆಂದು ಖಾತ್ರಿಯಾದ ಮೇಲೆ ಯುದ್ಧ ನಿಂತಿತು. ಭಾರತೀಯ ಸೇನೆ ಅಪಾರ ನಷ್ಟದೊಡನೆ ತನ್ನ ದೇಶಕ್ಕೆ ಹಿಂದಿರುಗಿತು. ಈಳಂನಲ್ಲಿ ಭಾರತ ವಿರೋಧಿ ಭಾವನೆ ಮೂಡಿತು. ಭಾರತೀಯ ಶಾಂತಿ ಸೇನೆಯನ್ನು ಶ್ರೀಲಂಕಾಕ್ಕೆ ಕಳಿಸಿದ್ದ ಅಂದಿನ ಪ್ರಧಾನಿಯನ್ನು ಮುಂದೊಂದು ದಿನ ಒಬ್ಬಳು ಹೆಣ್ಣುಮಗಳು ಮಾನವ ಬಾಂಬಾಗಿ ಉಡಾಯಿಸಿಬಿಟ್ಟಳು."

ಅಜ್ಜ ಮಾತು ನಿಲ್ಲಿಸಿದರು. ನಾನು ವಿಷಾದದ ಮೌನದಲ್ಲಿದ್ದೆ.

"ನಿಮಗೆ ಬೇಸರವಾಯ್ತಾ ಅಜ್ಜಾ?"

ಅಜ್ಜ ನಿಡುಸುಯ್ದರು. "ಆಗದೆ ಇರುತ್ತದೆಯೇ ಸ್ವಾಮಿ. ಆ ರಾಜೀವ್ ಗಾಂಧಿಗೆ ಯಾವ ರಾಜಕೀಯ ಅನುಭವವಿತ್ತು? ವಿಮಾನ ಹಾರಿಸುತ್ತಾ ಹೆಂಡತಿಯೊಡನೆ ಆರಾಮವಾಗಿದ್ದ ರಾಜೀವ ಗಾಂಧಿಯನ್ನು ಹೊಗಳು ಭಟರು ಅನ್ಯಾಯವಾಗಿ ರಾಜಕೀಯಕ್ಕೆ ಇಳಿಸಿದರು. ಅಲ್ಲಾದರೂ ಸುಮ್ಮನೆ ಬಿಟ್ಟರಾ? ಶ್ರೀಲಂಕಾಕ್ಕೆ ಶಾಂತಿ ಸೇನೆಯನ್ನು ಕಳುಹಿಸುವಂತೆ ಹೇಳಿಕೊಟ್ಟು ದಾರಿ ತಪ್ಪಿಸಿದರು. ಒಂದು ತಪ್ಪು ನಿರ್ಧಾರ ರಾಜೀವ ಗಾಂಧಿಯನ್ನು ಛಿದ್ರ ಛಿದ್ರವಾಗಿ ಮಾಡಿತು.''



"ಆದರೆ, ಅಜ್ಜಾ ಅದು ರಾಜೀವ್ ಗಾಂಧಿಯ ಚಾಣಾಕ್ಷ ನಡೆಯಾಗಿತ್ತು. ನಾವು ಹೋಗದಿರುತ್ತಿದ್ದರೆ ಶ್ರೀಲಂಕಾಕ್ಕೆ ಅಮೆರಿಕ ಅಥವಾ ಚೀನಾ ಸಹಾಯ ಮಾಡ್ತಿತ್ತಲ್ಲಾ? ಆ ದೇಶಗಳ ಸೇನೆ ನಮ್ಮ ದೇಶದ ಹತ್ತಿರ ಬರುವುದು ಇಷ್ಟವಿಲ್ಲದೆ ರಾಜೀವ ಗಾಂಧಿ ಹಾಗೆ ಮಾಡಿದ್ದಲ್ವಾ?''

ಸ್ವಲ್ಪ ತಡೆದು, "ಲಂಕಾದಲ್ಲಿ ಮತ್ತೆ ಶಾಂತಿ ಸ್ಥಾಪನೆ ಆದುದು ಹೇಗೆ?" ಎಂದು ಕೇಳಿದೆ.

"ಶಾಂತಿ ಎಲ್ಲಿ ಸ್ಥಾಪನೆಯಾಗಿದೆ? ಯುದ್ಧ ಮಾತ್ರ ನಿಂತಿದೆ. ಸುಪ್ರೀಂ ಕಮಾಂಡರ್ ವೇಲುಪಿಳ್ಳೈ ಪ್ರಭಾಕರನ್‌ರನ್ನು ಮೋಸದಿಂದ ಕೊಂದು ಹಾಕಿದರು. ಅಲ್ಲಿಗೆ ಯುದ್ಧ ನಿಂತು ಹೋಯಿತು."

ನನಗೆ ಪರಮಾಶ್ಚರ್ಯವಾಯಿತು.

"ಭಾರತೀಯ ಸೈನಿಕರಿಂದ ಆಗದ್ದನ್ನು ಶ್ರೀಲಂಕಾದ ಸೈನಿಕರು ಮಾಡಿಬಿಟ್ಟರೇ?"